ಅನುಸಂಧಾನದ ಜಾಗರಣೆಯಂ ಲೋಕಹಿತಂ ಮಮ ಕರಣೀಯಂ

# ಪ್ರಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಡಾ.ಮೋಹನ್ ಭಾಗವತ್ ಅವರು ಮಹಾರಾಷ್ಟ್ರದ ವಿಜಯದುರ್ಗ ಮತ್ತು ಸಿಂಧೂದುರ್ಗಕ್ಕೆ ಭೇಟಿ ನೀಡಿದರು ಹಾಗೂ ಸಿಂಧೂದುರ್ಗದ ಮಾಲ್ವಾನ್‌ನಲ್ಲಿನ ಭವಾನಿ ಮಂದಿರದಲ್ಲಿ ಪೂಜೆ ಸಲ್ಲಿಸಿದರು.

ಸಂಪುಟ : 44 | ಸಂಚಿಕೆ : 21 | ಮಾಘ-ಫಾಲ್ಗುಣ | ಕಲಿಯುಗಾಬ್ದ 5124 | 15-02-2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಅಮೃತ ಕಾಲದ ಕರ್ನಾಟಕದ ಪದ್ಮ ಕಣ್ಮಣಿಗಳು

ಈ ಬಾರಿ ಕರ್ನಾಟಕದಿಂದ ಎಂಟು ಜನ ಸರಳ ಸಜ್ಜನಿಕೆಯ ಜೀವನ ನಡೆಸಿದ ಕನ್ನಡಿಗರು ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ ಪಡೆದಿರುವುದು ಅವರ ಕೊಡುಗೆಗೆ ನೀಡಿದ ಗೌರವ ಆಗಿರುವುದರ ಜೊತೆಗೆ ನಾಗರಿಕ ಪ್ರಶಸ್ತಿಗಳು ಜನಸಾಮಾನ್ಯರನ್ನು ಹುಡುಕಿ ಬರುತ್ತಿರುವ ದ್ಯೋತಕವಾಗಿದೆ.




## ಪದ್ಮ ವಿಭೂಷಣ ಎಸ್.ಎಂ.ಕೃಷ್ಣ

ಮದ್ದೂರಿನಲ್ಲಿ 1932ರಲ್ಲಿ ಜನಿಸಿದ ರಾಜಕೀಯ ಮುತ್ಸದ್ದಿ ಶ್ರೀ ಎಸ್ ಎಂ ಕೃಷ್ಣರವರು ವಿವಿಧ ಸಾಂವಿಧಾನಿಕ ಹುದ್ದೆಗಳನ್ನು ಅಲಂಕರಿಸುವುದರ ಜೊತೆಗೆ ಉತ್ತಮ ಆಡಳಿತ ಮತ್ತು ಜನಪರ ಕಲ್ಯಾಣ ಕಾರ್ಯಕ್ರಮಗಳನ್ನು ನೀಡಿರುತ್ತಾರೆ. ಇವರು ಸಾರ್ವಜನಿಕ ವಲಯಕ್ಕೆ ನೀಡಿರುವ ಕೊಡುಗೆಗೆ ದೇಶದ ಎರಡನೇ ಅತ್ಯುತ್ತಮ ನಾಗರಿಕ ಪ್ರಶಸ್ತಿ ಪದ್ಮ ವಿಭೂಷಣ ಪಡೆದಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. 1962ರಲ್ಲಿ ಮೊದಲ ಬಾರಿಗೆ ಇವರ ರಾಜಕೀಯ ಜೀವನದ ಪ್ರಾರಂಭ ಜವಹರಲಾಲ್ ನೆಹರು ಅವರೇ ಪ್ರಚಾರ ನೀಡಿದ ಅಭ್ಯರ್ಥಿ ಕೆ.ವಿ. ಶಂಕರ್‌ಗೌಡ ಅವರನ್ನು ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಮಣಿಸುವುದರೊಂದಿಗೆ ಪ್ರಾರಂಭವಾಯಿತು. ಮುಂದುವರೆದು, ಅವರು ಪ್ರಜಾ ಸಮಾಜವಾದಿ ಪಕ್ಷ ಸೇರಿದರು. ನಂತರ 1968ರಲ್ಲಿ ಈ ಪಕ್ಷವು ಕಾಂಗ್ರೆಸ್‌ನೊಂದಿಗೆ ವಿಲೀನವಾಯಿತು.

ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಹಲವಾರು ಆಡಳಿತಾತ್ಮಕ ಸುಧಾರಣೆಗಳು, ವಿಜ್ಞಾನ ತಂತ್ರಜ್ಞಾನ ಆಧಾರಿತ (E-Governance & Good Governance initiatives) ಪ್ರಮುಖವಾಗಿ ESCOMs, ಭೂಮಿ, ಖಾಸಗಿ-ಸಾರ್ವಜನಿಕ ಭಾಗಿತ್ವದ ಕಾರ್ಯಕ್ರಮಗಳಿಗೆ ಚಾಲ್ತಿ ನೀಡಿದರು. ವಿಜ್ಞಾನ ತಂತ್ರಜ್ಞಾನ ಕ್ಷೇತ್ರಕ್ಕೆ ಇವರು ನೀಡಿದ ಬೆಂಬಲ ಬೆಂಗಳೂರನ್ನು ಸಿಲಿಕಾನ್ ಕಣಿವೆ ಎಂದು ಗುರುತಿಸುವಲ್ಲಿ, IT/BT ವಲಯಗಳಿಗೆ ಹೆಚ್ಚಿನ ಉತ್ತೇಜನ ಸಿಗುವಲ್ಲಿ ಆರ್ಥಿಕ ಕ್ಷೇತ್ರಕ್ಕೆ ದೊಡ್ಡ ಕೊಡುಗೆಯಾಗಿ ಪರಿಣಮಿಸಿತು. ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್(BATF) ಮೂಲಕ ಬೆಂಗಳೂರು ಮಹಾನಗರ ಪಾಲಿಕೆ, ಬಿಡಿಎ, ಬಿಎಂಟಿಸಿ, BWSSB, ಬೆಸ್ಕಾಂ, ಬಿಎಸ್‌ಎನ್‌ಎಲ್ ಮತ್ತು ಬೆಂಗಳೂರು ಪೊಲೀಸ್ ಆಡಳಿತದಲ್ಲಿ ಕೈಜೋಡಿಸುವ ಅವಕಾಶ ಕಲ್ಪಿಸಿದರು. ಆರೋಗ್ಯ ವಿಮೆ ಕಾರ್ಯಕ್ರಮವಾದ ಯಶಸ್ವಿನಿ ಮತ್ತು ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿ ಊಟ ಪ್ರಾರಂಭಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಇವರ ಆಡಳಿತ ಅವಧಿಯಲ್ಲಿ ಕಾವೇರಿ ಮತ್ತು ಕೃಷ್ಣ ನದಿ ನೀರಿನ ವಿವಾದಗಳ ಬಗ್ಗೆ ಕಠಿಣ ನಿಲುವು ತಾಳಿದ್ದು ಗಮನಾರ್ಹ. ಇವರು 2017ರಲ್ಲಿ ಕಾಂಗ್ರೆಸ್ ತೊರೆದು ಭಾರತೀಯ ಜನತಾ ಪಕ್ಷ ಸೇರಿದರು. ಇತ್ತೀಚೆಗೆ ತಮ್ಮ ರಾಜಕೀಯ ಜೀವನ ನಿವೃತ್ತಿ ಘೋಷಿಸಿರುತ್ತಾರೆ. ಲೋಕ ಸಭೆ (1968, 1971, 1980), ರಾಜ್ಯ ಸಭೆ (1996, 2008), ವಿಧಾನ ಸಭೆ (1962), ವಿಧಾನ ಪರಿಷತ್ ಸದಸ್ಯರಾಗಿ (1972), ಕೇಂದ್ರ (2009) ಮತ್ತು ರಾಜ್ಯ (1972) ಸಚಿವರಾಗಿ, ಕರ್ನಾಟಕದ ಮುಖ್ಯ ಮಂತ್ರಿಯಾಗಿ (1999-2004), ಕರ್ನಾಟಕದ ಉಪ ಮುಖ್ಯ ಮಂತ್ರಿಯಾಗಿ (1993) ವಿಧಾನ ಸಭೆಯ ಸ್ಪೀಕರ್ (1989), ಮಹಾರಾಷ್ಟ್ರ ರಾಜ್ಯಪಾಲರಾಗಿ (2004-08) ಸಾರ್ಥಕ ರಾಜಕೀಯ ಜೀವನ ನಡೆಸಿರುತ್ತಾರೆ.

## ಪದ್ಮಭೂಷಣ ಡಾ.ಎಸ್.ಎಲ್ ಭೈರಪ್ಪ



ಸಾಹಿತ್ಯ ಕ್ಷೇತ್ರದ ಚಿರಪರಿಚಿತ ಬರಹಗಾರರಾದ ಎಸ್.ಎಲ್. ಭೈರಪ್ಪರವರು 1931ರಲ್ಲಿ ಚೆನ್ನರಾಯಪಟ್ಟಣ, ಹಾಸನದಲ್ಲಿ ಜನಿಸಿದರು. ಮೊದಲ ಕೃತಿ ಭೀಮಕಾಯ (1958) ಸೇರಿದಂತೆ ಸುಮಾರು 24 ಕಾದಂಬರಿಗಳನ್ನು ಇವರು ರಚಿಸಿರುತ್ತಾರೆ. 2017ರಲ್ಲಿ ಬಂದ ಉತ್ತರಕಾಂಡ ರಾಮಾಯಣ ಆಧಾರಿತವಾಗಿದೆ. ವಂಶವೃಕ್ಷ, ತಬ್ಬಲಿಯೂ ನೀನಾದೆ ಮಗನೇ, ಆವರಣ, ಸಾರ್ಥ, ಮತದಾನ, ನಾಯಿ ನೆರಳು, ಮುಂತಾದ ಪ್ರಮುಖ ಕಾದಂಬರಿಗಳ ಮೂಲಕ ಭಾರತದ ಪ್ರಾಚೀನ ತಾತ್ವಿಕ ಚಿಂತನೆಗಳನ್ನು ಮತ್ತು ಸಮಾಜಿಕ ವ್ಯವಸ್ಥೆಯನ್ನು ವಿದೇಶಿ ಆಕ್ರಮಣಗಳ ಪ್ರಭಾವ ಮುಂತಾದವುಗಳನ್ನು ಜನಸಾಮಾನ್ಯರಿಗೆ ತಲುಪಿಸಿರುತ್ತಾರೆ. ಟಿಪ್ಪು ಸುಲ್ತಾನ್ ಖಂಡನೆಗಾಗಿ, ಭಾರತದ ಸಂಪ್ರದಾಯಗಳನ್ನು, ನಂಬಿಕೆಗಳನ್ನು ಸಮರ್ಥಿಸಿಕೊಂಡ ಕಾರಣ, ಸಂಸ್ಕೃತ ಭಾಷೆಯು ಭಾರತದ ಎಲ್ಲಾ ಭಾಷೆಗಳ ತಾಯಿ ಎಂದು ತಿಳಿಸುವ ಮೂಲಕ ಇವರು ಎಡಪಂಥೀಯರ ವಿರೋಧ ಕಟ್ಟಿಕೊಳ್ಳಬೇಕಾಯಿತು. ಅವರಿಗೆ ಈ ವರ್ಷದ ಪದ್ಮಭೂಷಣ ಪ್ರಶಸ್ತಿ ಬಂದ ಸಂದರ್ಭ "ಕುಮಾರವ್ಯಾಸರು ಮರಣ ಹೊಂದಿ 500 ವರ್ಷಗಳೇ ಕಳೆದಿದೆ, ಆದರೂ ಅವರ ಸಾಹಿತ್ಯ ಜೀವಂತವಾಗಿದೆ. ಈ ರೀತಿ ನನ್ನ ಕೃತಿಗಳಿಗೆ ಅಂತಹ ಶಕ್ತಿ ಇದ್ದರೆ ನನಗೆ ಸಂತೋಷ" ಎಂದರು. ಮೂರು ದಶಕಗಳ ಕಾಲ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುವ ಇವರು 2010ರ ಕನ್ನಡಕ್ಕೆ ಮೊದಲ ಸರಸ್ವತಿ ಸಮ್ಮಾನ್ ಪುರಸ್ಕಾರ ತಂದುಕೊಟ್ಟರು. ಪದ್ಮಶ್ರೀ, ಪಂಪಾ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆಯುವುದರ ಜೊತೆಗೆ 20ಕ್ಕೂ ಹೆಚ್ಚು ಸಂಶೋಧನಾರ್ಥಿಗಳು ಇವರ ಕೃತಿಗಳ ಅಧ್ಯಯನ ನಡೆಸಿರುತ್ತಾರೆ. ಇವರ ಕೃತಿಗಳು ಭಾರತದ ವಿವಿಧ ಭಾಷೆಗಳಲ್ಲಿ ಭಾಷಾಂತರವಾಗಿದ್ದು, ಆರು ಕೃತಿಗಳು ಇಂಗ್ಲಿಷ್‌ಗೆ, ಅಲ್ಲದೆ ರಷ್ಯನ್ ಭಾಷೆಗಳಿಗೂ ಅನೇಕ ಕೃತಿಗಳು ಅನುವಾದ ಕಂಡಿವೆ.

## ಪದ್ಮಭೂಷಣ ಶ್ರೀಮತಿ ಸುಧಾಮೂರ್ತಿ



ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರು ಸುಧಾಮೂರ್ತಿರವರು 1950 ಹಾವೇರಿಯ ಶಿಗ್ಗಾವಿನಲ್ಲಿ ಜನಿಸಿದರು. ಬಹುಮುಖ ವ್ಯಕ್ತಿತ್ವದ ಇವರು ಎಲ್ಲಾ ವಯೋಮಾನದವರಿಗೂ ಇಷ್ಟವಾಗುವವರು. ಮಕ್ಕಳ ಕೃತಿಗಳ ಮೂಲಕ ಮಕ್ಕಳ ಅಜ್ಜಿ ಎಂದು ಪ್ರೀತಿಯಿಂದ ಕರೆಸಿಕೊಳ್ಳುವ ಇವರು, ಯುವಕರಿಗೆ ತಮ್ಮ ಪ್ರೇರಣಾದಾಯಕ ಭಾಷಣಗಳ ಮೂಲಕ ಪ್ರೇರಣೆ ನೀಡುತ್ತಾರೆ. ತಮ್ಮ ಬಳಿ ಇದ್ದ ಉಳಿತಾಯ 10000 ರೂಪಾಯಿಗಳನ್ನು ತಮ್ಮ ಪತಿ ನಾರಾಯಣ್ ಮೂರ್ತಿರವರಿಗೆ ನೀಡಿ ಇನ್ಫೋಸಿಸ್ ಸಂಸ್ಥೆ ಸ್ಥಾಪನೆಗೆ ಕಾರಣಕರ್ತರಾದರು. ಇವರು ಗಣಕ ವಿಜ್ಞಾನ ಮತ್ತು ಎಂಜಿನಿಯರಿಂಗ್‌ನಲ್ಲಿ ತಮ್ಮ ವೃತ್ತಿ ಪ್ರಾರಂಭಿಸಿದವರು. TELCO (ಇಂದಿನ ಟಾಟಾ ಮೋಟರ್ಸ್) ಸಂಸ್ಥೆಯ ಮೊದಲ ಮಹಿಳಾ ಇಂಜಿನಿಯರ್ ಆಗಿದ್ದರು. ಸಂಸ್ಥೆಯಲ್ಲಿ ಪುರುಷರಿಗೆ ಮಾತ್ರ ಆದ್ಯತೆ ನೀಡುತ್ತಿದ್ದನ್ನು ಪ್ರಶ್ನಿಸಿದ್ದರು.

ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಹಲವಾರು ಕೃತಿಗಳನ್ನು ಇವರು ರಚಿಸಿರುತ್ತಾರೆ. ಇವರ ಸರಳ ಸಜ್ಜನಿಕೆಯ ಜೀವನ ಶೈಲಿ ಎಲ್ಲರಿಗೂ ಮಾದರಿ. ಇವರು 2015ರಲ್ಲಿ ಮೂರ್ತಿ ಕ್ಲಾಸಿಕಲ್ ಲೈಬ್ರರಿ ಆಫ್ ಇಂಡಿಯಾ ಸ್ಥಾಪಿಸಿ, ಹಾರ್ವರ್ಡ್ ವಿಶ್ವವಿದ್ಯಾಲಯ ಪ್ರೆಸ್ ಮೂಲಕ ಭಾರತದ ಸಾಹಿತ್ಯ ಸಂಬಂಧಿತ ಕೃತಿಗಳನ್ನು ಪ್ರಕಟಣೆ ಮಾಡಲು ಅವಕಾಶ ಕಲ್ಪಿಸಿರುತ್ತಾರೆ. ಬಿಲ್ ಗೇಟ್ಸ್ ಸಂಸ್ಥೆಯ ಮೂಲಕ ಸಾರ್ವಜನಿಕ ಆರೋಗ್ಯ, ಸಾರ್ವಜನಿಕ ಆಸ್ಪತ್ರೆ ಸುಧಾರಣೆ ಸಂಬಂಧಿತ ಕಾರ್ಯಕ್ರಮಗಳಲ್ಲಿ ತೊಡಗಿರುತ್ತಾರೆ. ಇವರು ಗ್ರಾಮೀಣ ಅಭಿವೃದ್ಧಿ, ಸಮಾಜ ಸುಧಾರಣೆ ಕಾರ್ಯಗಳ ಜೊತೆಗೆ ಇನ್ಫೋಸಿಸ್ ಪ್ರತಿಷ್ಠಾನದ ಮೂಲಕ ಅಗತ್ಯವಿರುವವರಿಗೆ ಹಣಕಾಸಿನ ನೆರವನ್ನು ನೀಡುತ್ತಾರೆ.

ಶಿಕ್ಷಣ ತಜ್ಞರು, ಬರಹಗಾರರು, ಸಾಮಾಜಿಕ ಸುಧಾರಕರು ಹಾಗೂ ಪ್ರೇರಣಾದಾಯಕ ಭಾಷಣಕಾರರಾಗಿರುವ ಇವರಿಗೆ ಈ ವರ್ಷದ ಪದ್ಮ ಭೂಷಣ ದೊರೆತಿರುವುದು ಅವರ ವ್ಯಕ್ತಿತ್ವಕ್ಕೆ ನೀಡಿದ ಮನ್ನಣೆ. ಇವರ ಪ್ರಮುಖ ಕೃತಿಗಳು ಹೌ ಐ ಟಾಟ್ ಮೈ ಗ್ರಾಂಡ್ ಮದರ್ ಟು ರೀಡ್, ಮಹಾಶ್ವೇತಾ, ಡಾಲರ್ ಸೊಸೆ, ಗೋಪಿಸ್ ಡೈರಿ ಮುಂತಾದವು. ಇವರನ್ನು ಹುಡುಕಿ ಹಲವು ಪ್ರಶಸ್ತಿಗಳು ಬಂದಿವೆ- ಓಜಸ್ವಿನಿ, ರಾಜಲಕ್ಷ್ಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಆರ್ ಕೆ ನಾರಾಯಣ್ ಸಾಹಿತ್ಯ ಪ್ರಶಸ್ತಿ, ಹಾನರರಿ ಎಲ್‌ಎಲ್‌ಡಿ, ಬಸವ ಶ್ರೀ ಪ್ರಶಸ್ತಿ, ಕ್ರಾಸ್ ವರ್ಡ್-ರೇಮಂಡ್ ಪ್ರಶಸ್ತಿ, ಐಐಟಿ ಕಾನ್ಪುರ್ ವತಿಯಿಂದ ಡಾಕ್ಟರ್ ಆಫ್ ಸೈನ್ಸ್ ಕೆಲವು ಪ್ರಮುಖ ಗೌರವಗಳಾಗಿವೆ.

## ಪದ್ಮಶ್ರೀ ಖಾದರ್ ವಲಿ



ಭಾರತದ ಸಿರಿಧಾನ್ಯ ಮಾನವರೆಂದು ಗುರುತಿಸಿಕೊಳ್ಳುವ ಖಾದರ್ ವಲಿ ದುಡೆಕುಲರವರು ಮೂಲತಃ ಒರ್ವ ಕೃಷಿ ವಿಜ್ಞಾನಿಯಾಗಿದ್ದವರು. ಇವರು ಆಂಧ್ರಪ್ರದೇಶದ ಕಡಪದಲ್ಲಿ ಜನಿಸಿ, ಮೈಸೂರಿನಿಂದ ವಿಜ್ಞಾನ ವಿಭಾಗದ ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ. ನಂತರ, ಭಾರತೀಯ ವಿಜ್ಞಾನ ಸಂಸ್ಥೆ(IISc) ಬೆಂಗಳೂರು, ಇಲ್ಲಿಂದ ತಮ್ಮ ಪಿ.ಎಚ್.ಡಿ. ಪದವಿಯನ್ನು ಸ್ಟೆರಾಯ್ಡ್ ಅಧ್ಯಯನಕ್ಕೆ ಪಡೆದಿರುತ್ತಾರೆ ಹಾಗೂ ಮೈಸೂರಿನಲ್ಲಿಯೇ ನೆಲೆಸಿರುತ್ತಾರೆ. ಇವರು ಪೋರ್ಟ್-ಲ್ಯಾಂಡ್ ಆರೆಗೊನ್ ಪರಿಸರ ವಿಜ್ಞಾನ ವಿಭಾಗದ ಪೋಸ್ಟ್ ಡಾಕ್ಟರಲ್ ಫೆಲೋ ಆಗಿರುತ್ತಾರೆ. ಇವರು CFTRI ವಿಜ್ಞಾನಿಯು ಆಗಿ ಸೇವೆ ಸಲ್ಲಿಸಿರುತ್ತಾರೆ. ನಶಿಸಿ ಹೋಗುತ್ತಿದ್ದ ಐದು ಪ್ರಮುಖ ಧಾನ್ಯಗಳ ಔಷಧೀಯ ಗುಣಗಳನ್ನು ಗುರುತಿಸಿ, ಮಾರಣಾಂತಿಕ ಕಾಯಿಲೆಗಳನ್ನು ಪರಿಹರಿಸುವ ಇವುಗಳ ಗುಣದ ಆಧಾರದ ಮೇಲೆ ಇವುಗಳ ಬಳಕೆಯನ್ನು ಪುನಶ್ಚೇತನಗೊಳಿಸಿದ ಖ್ಯಾತಿ ಇವರಿಗೆ ಸಲ್ಲುತ್ತದೆ

'ಖಾದರ್ ಡಯಟ್', 'ಖಾದರ್ ಮಿಲ್ಲೆಟ್' ಎಂದೇ ಪ್ರಖ್ಯಾತ ಪೌಷ್ಟಿಕಾಂಶ ದಿನಚರಿಗಳು ಆರೋಗ್ಯ ಕ್ಷೇತ್ರದಲ್ಲಿ ದೊಡ್ಡ ಹೆಸರುಗಳಾಗಿವೆ. ಇವರ ಕರೋನ ಹ್ಯಾಂಡ್ ಬುಕ್ ಜನಸಾಮಾನ್ಯರ ಪಾಲಿಗೆ ಧನ್ವಂತರಿಯ ರೂಪವಾಗಿತ್ತು. ಐದು ಧಾನ್ಯಗಳನ್ನು ಇವರು ಸಿರಿಧಾನ್ಯ ಎಂದು ನಾಮಕರಣ ಗೊಳಿಸುವ ಮೂಲಕ ಆರೋಗ್ಯವೇ ಭಾಗ್ಯ ಎಂಬುದನ್ನು ಸಾರಿದರು. ಈ ಸಿರಿಧಾನ್ಯಗಳನ್ನು ಬೆಳೆಯಲು ತಮ್ಮದೇ ಆದ ಕಾಡು ಕೃಷಿ (Jungle Farming) ವಿಧಾನವನ್ನು ಪರಿಚಯಿಸಿದರು. ಸಿರಿಧಾನ್ಯ, ಎಲೆಗಳ ಡಿಕಾಕ್ಷನ್, ಹೋಮಿಯೋಪತಿ ಮೂಲಕ ಇವರು ಜೀವನಶೈಲಿ ಸಂಬಂಧಿಸಿದ, ನರಮಂಡಲಕ್ಕೆ ಸಂಬಂಧಿಸಿದ, ರಕ್ತ ಸಂಬಂಧಿಸಿದ ಹಲವಾರು ಕಾಯಿಲೆಗಳಿಗೆ ಚಿಕಿತ್ಸೆ ನೀಡುತ್ತಾ ಬಂದಿದ್ದಾರೆ. ಇವರು ಆರೋಗ್ಯ ಸಂಬಂಧಿತ ಉಪನ್ಯಾಸಗಳನ್ನು ಸತತವಾಗಿ ನೀಡುತ್ತಿದ್ದು, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಮನೆ ಮಾತಾಗಿರುತ್ತಾರೆ. ಖಾದರ್ ವಲಿರವರಿಗೆ ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗದ ಈ ವರ್ಷದ ಪದ್ಮಶ್ರೀ ಪ್ರಶಸ್ತಿ ನೀಡಲಾಗಿದೆ.

## ಪದ್ಮಶ್ರೀ ರಾಣಿ ಮಾಚಯ್ಯ



ರಾಣಿ ಮಾಚಯ್ಯ 1943ರಲ್ಲಿ ಕೊಡಗು ಜಿಲ್ಲೆಯ ಸಿದ್ದಾಪುರದಲ್ಲಿ ಜನಿಸಿದರು. ಈ ವರ್ಷದ ಪದ್ಮಶ್ರೀ ಪ್ರಶಸ್ತಿಯನ್ನು ಇವರಿಗೆ ಕಲಾವಿಭಾಗದಲ್ಲಿ ಗುರುತಿಸಿ ನೀಡಲಾಗಿದೆ. ಇವರು ಉಮ್ಮತಾಟ್ ಎಂಬ ಕೊಡಗಿನ ಜನಪದ ನೃತ್ಯವನ್ನು ಸಂರಕ್ಷಿಸಿ, ಬೆಳೆಸಿ ಕೊಡವ ಸಂಸ್ಕೃತಿ ಬೆಳೆಸಿರುವ ಕೀರ್ತಿ ಪಡೆದಿರುತ್ತಾರೆ. ಅವರು ಈ ಹಿಂದೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ. 1984ರಲ್ಲಿ ಉಮ್ಮತಾಟ್ ಜನಪದ ನೃತ್ಯ ಪ್ರಚಾರ ಪ್ರಾರಂಭಿಸಿದ ಇವರು ಹತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಈ ನೃತ್ಯದಲ್ಲಿ ತರಬೇತಿ ನೀಡಿರುತ್ತಾರೆ. ಇವರು ಕಾವೇರಿ ಕಲಾ ವೃಂದ ಎಂಬ ಸಂಸ್ಥೆ ಸ್ಥಾಪನೆ ಮಾಡಿ ಗೋವಾ, ಹಿಮಾಚಲ್ ಪ್ರದೇಶ್, ಜಮ್ಮು-ಕಾಶ್ಮೀರ್, ಒಡಿಶಾ, ಮಿಝೋರಾಂ, ಮಹಾರಾಷ್ಟ್ರ, ಮಧ್ಯಪ್ರದೇಶ, ಪಂಜಾಬ್ ಮತ್ತು ಉಳಿದ ರಾಜ್ಯಗಳಲ್ಲಿ ಕಲಾ ಪ್ರದರ್ಶನ ಮತ್ತು ತರಬೇತಿಗಳನ್ನು ನೀಡುತ್ತಾರೆ. ಇವರಿಗೆ ಈ ಹಿಂದೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯು ಬಂದಿರುತ್ತದೆ. ಇವರು ಉಮ್ಮತಾಟ್ ನೃತ್ಯದ ಜೊತೆ ಜೊತೆಗೆ ಕೊಡವ ಭಾಷೆಯ ಲಿಪಿ ತಯಾರಿಸುವ ಪ್ರಮುಖ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ ಹಾಗೂ ವಿದ್ಯಾರ್ಥಿಗಳ ತಂಡಗಳಿಗೆ ಲಿಪಿ ತಯಾರಣೆ ತರಬೇತಿಗಳನ್ನು ನೀಡುತ್ತಿದ್ದಾರೆ.

4ನೇ ಪುಟಕ್ಕೆ...

# ಸಂಸ್ಮರಣೆ | ಧ್ಯೇಯಜೀವನದ ಬಗ್ಗೆ ಶ್ರೀ ಗುರೂಜಿ

ಮಾಘ ಬಹುಳ ಏಕಾದಶಿ (ಫೆಬ್ರವರಿ 16, ಗುರುವಾರ) ಸಂಘದ ಎರಡನೇ ಸರಸಂಘಚಾಲಕರಾಗಿದ್ದ ಶ್ರೀ ಗುರೂಜಿಯವರ ಜನ್ಮದಿನ. ಪ್ರತಿಯೊಬ್ಬ ಮನುಷ್ಯನಿಗೂ ಕಷ್ಟಗಳು ಬರುತ್ತವೆ. ನಮ್ಮ ಜೀವನದ ಕಷ್ಟಗಳ ಮಧ್ಯೆಯೂ ನಮ್ಮ ಧ್ಯೇಯದಿಂದ ದೂರವಾಗದೆ ಸಂಕಟಗಳನ್ನು ಎದುರಿಸುತ್ತಾ ನಾವು ನಮ್ಮ ಜೀವನವನ್ನು ಸಮಾಜ ಜೀವನಕ್ಕೆ ಹೇಗೆ ಅರ್ಪಿಸುವುದು ಎಂಬುದನ್ನು ಶ್ರೀ ಗುರೂಜಿಯವರು ತಮ್ಮ ಮಾತುಗಳಲ್ಲಿ ತಿಳಿಸಿದ್ದಾರೆ.

ಮನುಷ್ಯ ಒಬ್ಬನೇ ಇರಲಾರ. ಅವನನ್ನು ಸಾಮಾಜಿಕ ಪ್ರಾಣಿ ಎನ್ನುತ್ತಾರೆ. ಆದರೆ ಅವನು ಜೀವಿಸಿರುವ ಸಮಾಜದಲ್ಲಿ ಉಳಿದವರೆಲ್ಲರು ಚಡಪಡಿಸುತ್ತಿದ್ದರೆ ಒಬ್ಬನೇ ವ್ಯಕ್ತಿಯ ಸುಖಕ್ಕೆ ಯಾವ ಮಹತ್ವವೂ ಇಲ್ಲ. ಇಡೀ ಸಮಾಜವನ್ನು ನಾವು ಉನ್ನತಿಗೊಳಿಸಬೇಕು ಎಂಬುದೇ ನಮ್ಮ ಜೀವನದ ಆದರ್ಶವಾಗಬೇಕು.


ಆದ್ದರಿಂದ ನಾವು "ಸಂಪೂರ್ಣ ಸಮಾಜಕ್ಕೆ ಒಳಿತಾಗುವ, ಅದರಿಂದ ವೈಯಕ್ತಿಕ ಸುಖಕ್ಕೆ ಹಾನಿಯಾದರೂ ಪರವಾಗಿಲ್ಲ" ಎನ್ನುವಂಥ ಗುಣಗಳನ್ನು ಬೆಳೆಸಿಕೊಳ್ಳುವ ಪ್ರಯತ್ನ ಮಾಡಬೇಕು. ನಮ್ಮ ಪ್ರಾಚೀನ ಇತಿಹಾಸ ಇಂತಹ ಉದಾಹರಣೆಗಳಿಂದ ತುಂಬಿದೆ. ಶ್ರೀ ರಾಮಚಂದ್ರ ತಂದೆಯ ಆಜ್ಞೆಯ ಉಲ್ಲಂಘನೆ ಮಾಡುವ ಶಕ್ತಿ ಇದ್ದರೂ ದುಷ್ಟ ಶಿಕ್ಷಣ ಮತ್ತು ಸಜ್ಜನರ ಪಾಲನೆಗಾಗಿ ಸುಖವನ್ನು ಕಡೆಗಣಿಸಿ ಹದಿನಾಲ್ಕು ವರ್ಷಗಳ ವನವಾಸವನ್ನು ಸ್ವೀಕರಿಸಿದ. ಜೀವನಪೂರ್ತಿ ಆತ ಸ್ವಂತಕ್ಕೆ ಕಷ್ಟವನ್ನೇ ಸ್ವೀಕರಿಸಿ ಜನರಿಗೆ ಸುಖ ಕೊಟ್ಟ. ಸಜ್ಜನರನ್ನು ಸಂರಕ್ಷಿಸಿ ಜನರ ಮುಂದೆ ತನ್ನ ಜೀವನದ ಆದರ್ಶ ಇರಿಸಿದ.

ತಂದೆತಾಯಿಯರ ಸೆರೆಮನೆ ವಾಸ, ನಿರಂತರವಾಗಿ ಬಂದಿದ್ದ ವಿಪತ್ತುಗಳ ಕಾರಣದಿಂದಾಗಿ ಶ್ರೀ ಕೃಷ್ಣನ ಬಾಲ್ಯ ಜೀವನವೂ ಎಷ್ಟು ಕಷ್ಟಮಯವಾಗಿತ್ತು? ಆದರೆ ಅವನು ಎಲ್ಲ ರೀತಿಯ ವಿಘ್ನಗಳನ್ನು ಎದುರಿಸುತ್ತಲೇ ಬಾಲ್ಯವನ್ನು ಕಳೆದನು. ಜರಾಸಂಧನು ಮತ್ತೆ ಮತ್ತೆ ನಡೆಸಿದ ಆಕ್ರಮಣದ ಕಾರಣದಿಂದಾಗಿ ಅವನು ಮಥುರೆಯನ್ನೇ ಬಿಡಬೇಕಾಯಿತು. ದ್ವಾರಕೆಗೆ ಹೋದನಂತರವೂ ಸಂಕಟಗಳು ಅವನನ್ನು ಬಿಡಲಿಲ್ಲ. ದೇವರ ಅವತಾರವೇ ಅಗಿದ್ದರೂ ಅವನು ಸಮಾಜದ ಸುಖಕ್ಕಾಗಿ ಎಲ್ಲ ಕಷ್ಟಗಳನ್ನು ಸಹಿಸಿದ.

ಈಗಿನ ಇತಿಹಾಸದಲ್ಲಿ ಮಹಾರಾಣಾ ಪ್ರತಾಪರ ಉದಾಹರಣೆ ಇದೆ. ಅವರು ತಮ್ಮ ಅಲ್ಪ ಶಕ್ತಿಯಿಂದಲೇ ವಿಶಾಲವಾದ ಮೊಘಲ ಸಾಮ್ರಾಜ್ಯದ ಸಾಮ್ರಾಟ ಅಕ್ಬರನೊಡನೆ ಹೋರಾಡಿದರು. ಅದೇ ರೀತಿ ಛತ್ರಪತಿ ಶಿವಾಜಿ ಮಹಾರಾಜರು ಅನೇಕ ಕಷ್ಟಗಳನ್ನು ಎದುರಿಸಿ ಮೊಘಲ ಸಾಮ್ರಾಜ್ಯವನ್ನು ಕೊನೆಗಾಣಿಸುವ ಸವಾಲನ್ನು ಸ್ವೀಕರಿಸಿದರು.

ನೀವು ನಿಮ್ಮ ವ್ಯಕ್ತಿತ್ವವನ್ನು ರಾಷ್ಟ್ರದಲ್ಲಿ ವಿಲೀನಗೊಳಿಸಿದರೆ ಆಗ ನೀವು ವ್ಯಕ್ತಿಯಾಗಿ ಉಳಿಯದೇ ರಾಷ್ಟ್ರವಾಗುತ್ತೀರಿ. ನಮ್ಮ ಆನಂದದಲ್ಲಿ ಮಿತ್ರರನ್ನು ಸೇರಿಸಿಕೊಂಡಾಗ ಆನಂದ ದ್ವಿಗುಣಗೊಳ್ಳುತ್ತದೆ. ಯೋಚಿಸಿ, ಇಡೀ ರಾಷ್ಟ್ರದ ಸುಖದಲ್ಲಿ ನಿಮ್ಮ ಸುಖ ಕಂಡರೆ, ಅದರ ದುಃಖದಲ್ಲಿ ನೀವೂ ದುಃಖಿಗಳಾದರೆ ನಿಮ್ಮ ವ್ಯಕ್ತಿತ್ವ ಎಷ್ಟು ವಿಸ್ತಾರಗೊಂಡಿರುತ್ತದೆ. ಸಮಾಜಹಿತಕ್ಕಾಗಿ ತಮ್ಮ ಸ್ವಂತಿಕೆಯನ್ನು ಹೇಗೆ ಬಿಟ್ಟುಕೊಡುವುದು ಎಂಬುದನ್ನು ಅರಿಯಲು ಡಾಕ್ಟರಜಿಯವರ ಜೀವನವನ್ನು ನೋಡಿ.


ನಾವು ಕೆಲಸ ಮಾಡುವಾಗ ಧ್ಯೇಯಸಿದ್ಧಿಯ ಬಗ್ಗೆ ನಿತಾಂತ ಶ್ರದ್ಧೆ ಇರಬೇಕು. ಯಾವನೇ ವ್ಯಕ್ತಿಯಾಗಲಿ ಏಕಕಾಲದಲ್ಲಿ ಸಹಸ್ರಾರು ಉದ್ದೇಶಗಳನ್ನು ಈಡೇರಿಸಿಕೊಳ್ಳಲಾರ. ಒಂದೇ ಗುರಿಯನ್ನು ಇಟ್ಟುಕೊಂಡು ಅದರ ಸಾಧನೆಗಾಗಿ ಉಳಿದೆಲ್ಲ ಶಕ್ತಿಯನ್ನು ಅರ್ಪಿಸಬೇಕಾಗುತ್ತದೆ. ನಮ್ಮ ಮುಂದೆ ಇರಿಸಿಕೊಂಡಿರುವ ಗುರಿಯನ್ನು ಸಾಧಿಸುವುದಕ್ಕಾಗಿ ಶ್ರದ್ಧೆ ಮತ್ತು ವಿಶ್ವಾಸಗಳಿಂದ ನಿರಂತರ ಪ್ರಯತ್ನಶೀಲರಾಗುವುದೇ ಸಫಲತೆಯ ರಹಸ್ಯ.



ಧ್ಯೇಯನಿಷ್ಠ ಸ್ವಯಂಸೇವಕನ ವೈಯಕ್ತಿಕ ಚಾರಿತ್ರ್ಯವೂ ಧ್ಯೇಯಕ್ಕೆ ಅನುಗುಣವಾಗಿಯೇ ಇರಬೇಕು. ಅದು ವಿಶುದ್ಧವಾಗಿಯೂ ಇರಬೇಕು. ಏಕೆಂದರೆ ವಿಶುದ್ಧ ಚಾರಿತ್ರ್ಯವೇ ಸಾಮಾಜಿಕ ಕಾರ್ಯಕರ್ತನಿಗೆ ಶಕ್ತಿಯ ಸ್ರೋತ.

ಒಬ್ಬ ಸಜ್ಜನರು ನನಗೆ 'ನಾವು ಸಮಾಜದ ಚಿಂತೆ ಯಾಕೆ ಮಾಡಬೇಕು? ಸಮಾಜ ನಮಗೆ ಏನು ಮಾಡಿದೆ' ಎಂದು ಕೇಳಿದರು. ಇದನ್ನು ಕೇಳಿ ನನಗೆ ತುಂಬಾ ದುಃಖವಾಯಿತು. ಇದಂತೂ ತುಂಬಾ ಹೀನ ಪ್ರವೃತ್ತಿ. ಈ ಪ್ರವೃತ್ತಿಯನ್ನು ತೊಲಗಿಸಬೇಕು. ಈ ಸಂದರ್ಭದಲ್ಲಿ ನನಗೆ ಮಹಾಭಾರತದ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ಯುಧಿಷ್ಠಿರ ವನವಾಸಕಾಲದಲ್ಲಿದ್ದ. ಎಲ್ಲ ರೀತಿಯ ಕಷ್ಟಗಳ ನಡುವೆಯೂ ಭಗವಂತನಲ್ಲಿ ಭಕ್ತಿ ಆತನಿಗಿತ್ತು. ಒಮ್ಮೆ ದ್ರೌಪದಿ ಕೋಪದಿಂದ 'ಹಗಲೂ ರಾತ್ರಿ ದೇವರ ನಾಮ ಜಪಿಸುತ್ತಲೇ ಇರುತ್ತೀಯೆ. ದೇವರು ನಿನಗೆ ಏನು ಮಾಡಿದ್ದಾನೆ?' ಎಂದು ಕೇಳುತ್ತಾಳೆ. ಯುಧಿಷ್ಠಿರ ಶಾಂತವಾಗಿ ಹೇಳುತ್ತಾನೆ – "ದೇವರಿಗೆ ಹೂವು ಅಥವಾ ಕಾಣಿಕೆ ಕೊಟ್ಟು ಮಕ್ಕಳನ್ನು ಅಥವಾ ಸಂಪತ್ತನ್ನು ಬೇಡುವುದು ಭಕ್ತಿಯಲ್ಲ, ವ್ಯಾಪಾರ. ಮೋಸದಿಂದ ವ್ಯಾಪಾರ ಮಾಡುವುದು ಮತ್ತು ಏನಾದರೂ ಪಡೆದುಕೊಳ್ಳಬೇಕೆಂಬ ದೃಷ್ಟಿಯಿಂದ ಉಪಕಾರ ಮಾಡುವುದು ತಪ್ಪು. ದೇವರು ಸುಖ ಕೊಡಲಿ ಅಥವಾ ದುಃಖವನ್ನೇ ಕೊಡಲಿ, ಕಾಪಾಡಲಿ ಅಥವಾ ಬಿಡಲಿ, ನಾನು ನನ್ನದೆಂಬ ಭಾವನೆಯಿಂದ ಎಲ್ಲ ಸಂದರ್ಭಗಳಲ್ಲಿ ಅವನ ಸೇವೆ ಮಾಡುತ್ತೇನೆ."

ನಮ್ಮೊಳಗಿರುವ ಅನೇಕ ಗುಣಾವಗುಣಗಳನ್ನೂ ವಿಕಾರಗಳನ್ನೂ ಸರಿಯಾಗಿ ನಿಯಂತ್ರಿಸಿಕೊಂಡು ಮಾನಸಿಕ ಸುವ್ಯವಸ್ಥೆಯನ್ನು ನಿರ್ಮಿಸಿಕೊಳ್ಳುವುದು ಧರ್ಮದ ಒಂದು ಮಹತ್ವಪೂರ್ಣ ಅಂಗವಾಗಿದೆ. ಈ ಧರ್ಮವನ್ನು ನಮ್ಮ ಜೀವನದ ಆಧಾರವೆಂದು ಪರಿಗಣಿಸಿ ಅದಕ್ಕನುಕೂಲವಾಗುವಂತೆ ಕಾಮ ಅರ್ಥಗಳನ್ನು ನಿಯೋಜಿಸಿಕೊಂಡು, ಧರ್ಮದಿಂದ ಕೂಡಿದ ಸದ್ಗುಣ ಸಂಪನ್ನ ಜೀವನವನ್ನು ನಮ್ಮೊಳಗೆಯೇ ಬೆಳೆಸಿಕೊಳ್ಳುತ್ತಾ, ಅಂತಿಮ ಗುರಿಯ ನಿರಂತರ ಧ್ಯಾನಮಾಡುತ್ತ, ಅಂತಿಮ ಪುರುಷಾರ್ಥವಾದ ಮೋಕ್ಷದೆಡೆಗೆ ಪ್ರಯತ್ನಿಸುವುದೇ ಮಾನವ ಜೀವನದ ಸಂಪೂರ್ಣ ಸ್ವರೂಪವಾಗಿದೆ. ಇದೇ ಪರಿಪೂರ್ಣ ಜೀವನದ ಕಲ್ಪನೆಯಾಗಿದೆ.





## ವೈ ಡು ವಿ?

**ಮೂಲ:** ದೀವಟಿಗೆಗಳು – ಎಸ್.ಆರ್ ರಾಮಸ್ವಾಮಿ
**ಪ್ರಕಾಶಕರು :** ಸಾಹಿತ್ಯ ಸಂಗಮ
**ಸಂಪಾದನೆ :** ಬಾಲಭಾರತಿ

ಪುಸ್ತಕ ಪರಿಚಯ

ಪ್ರಸ್ತುತ ಕಾಲಘಟ್ಟದಲ್ಲಿ ನಮ್ಮ ಧಾರ್ಮಿಕ ಆಚರಣೆಗಳ ಹಿಂದಿನ ವೈಜ್ಞಾನಿಕ ಅರ್ಥವನ್ನು ಹುಡುಕುವ ಪ್ರಯತ್ನಗಳು ನಡೆಯುತ್ತಿವೆ. ಹಾಗೆಯೇ ಮನೆಯಲ್ಲಿ ಸಾಂಪ್ರದಾಯಿಕ ಆಚರಣೆಗಳನ್ನು ವೀಕ್ಷಿಸುವ ಮಕ್ಕಳು ಕೇಳುವ ಮುಗ್ಧ ಪ್ರಶ್ನೆಗಳಿಗೆ ಉತ್ತರವನ್ನು ನೀಡುವುದು ಪೋಷಕರಿಗೆ ಸವಾಲಿನ ಸಂಗತಿಯಾಗಿದೆ. ಈ ಇರಿಸುಮುರಿಸುಗೊಳ್ಳುವ ಪ್ರಮೇಯದಿಂದ ದೂರ ಉಳಿಯುವಂತೆ ಸಹಕರಿಸುವ ಪುಸ್ತಕವೇ 'ವೈ ಡು ವಿ'. ಈ ಪುಸ್ತಕದ ಅಧ್ಯಯನ ಮಕ್ಕಳಿಗೆ ನಮ್ಮ ಸಾಂಪ್ರದಾಯಿಕ ಆಚರಣೆಗಳ ಕುರಿತು ಶಿಕ್ಷಣ ನೀಡುವಲ್ಲಿ ಪೋಷಕರಿಗೆ ಸಹಕಾರಿಯಾಗಲಿದೆ. ಬಾಲ ಭಾರತಿಯ ತಾಯಂದಿರ ತಂಡ, ಸಾಹಿತ್ಯ ಸಂಗಮ ಪ್ರಕಾಶನದ ಮೂಲಕ ಈ ಪುಸ್ತಕವನ್ನು ಹೊರತಂದಿದ್ದು, ಇದರ ಮುಖಬೆಲೆ 100 ರೂಪಾಯಿಗಳು ಮಾತ್ರ. https://www.sahityabooks.com/ ನಲ್ಲಿ ದೊರೆಯಲಿದೆ.

## ಎಲ್ಲೋ ಕೇಳಿದ ಕಥೆ



ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಮಾತು ಜನಜನಿತ. ಅದಕ್ಕೆ ಬಹಳ ಒಳ್ಳೆಯ ಉದಾಹರಣೆ ವೀರ ಕೇಸರಿ ಸೀತಾರಾಮಶಾಸ್ತ್ರಿಗಳ ವಾಕ್ಚಮತ್ಕಾರ. ಅವರ ಮಾತು ಕೃತಿಗಳು ಅನನ್ಯ.

ಮಿರ್ಜಾ ಸರ್ಕಾರದ ದಿನಗಳಲ್ಲಿ ನಡೆದ ಪೀಪಲ್ಸ್ ಕಾನ್ಫರೆನ್ಸ್ ಬೆಂಗಳೂರಿನ ಆ ದಿನಗಳ ಒಂದು ಭವ್ಯ ಕಾರ್ಯಕ್ರಮ. ಅದರಲ್ಲಿ ನಾನಾ ಪಕ್ಷಗಳವರು ಸೇರಿದ್ದರು. ಸರ್ಕಾರದ ಪರವಾದ ಒಂದು ಪಕ್ಷ, ಜನರ ಪಕ್ಷ, ಮುಸ್ಲಿಂ ಪಕ್ಷ ಇತ್ಯಾದಿ. ಒಂದು ಸೆಷನ್ನಿನಲ್ಲಿ ಕೆ.ಎಚ್. ರಾಮಯ್ಯನವರು ಏನನ್ನೋ ಹೇಳಲು ಉಪಕ್ರಮಿಸಿದರು. ತಮಗೆ ಯಾರಿಂದಲೋ ಬಂದಿರುವ ಒಂದು ಪತ್ರವನ್ನು ಓದುವುದಾಗಿ ಹೇಳಿ ಜೇಬಿಗೆ ಕೈಹಾಕಿದರು. ಆದರೆ ಅವರು ಮಾತನಾಡಲು ಶುರು ಮಾಡಿದ್ದೇ ತಡ, ಪ್ರಜಾಪಕ್ಷದವರು ವಿರೋಧ ಮಾಡಿದರು.

"ಅವರು ಸರ್ಕಾರಿ ಅಧಿಕಾರಿಗಳು, ಅವರಿಗೆ ಈ ಸಭೆಯಲ್ಲಿ ಮಾತನಾಡಲು ಹಕ್ಕಿಲ್ಲ."

ಅವರು ಮಾತನಾಡಲಿ ಎಂದು ಕೆಲವರೂ, ಬೇಡವೆಂದು ಇನ್ನು ಕೆಲವರೂ ಆಗ್ರಹ ಮಾಡತೊಡಗಿದರು. ರಂಪಕ್ಕಿಟ್ಟುಕೊಂಡಿತು.

ಆಗ ವೀರಕೇಸರಿ ಸೀತಾರಾಮಶಾಸ್ತ್ರಿಗಳು ಎದ್ದು ನಿಂತು ಹೀಗೆಂದರು: "ರಾಮಯ್ಯನವರು ಮಾತನಾಡಿದರೆ ಮಾತನಾಡಲಿ, ನನ್ನದು ಒಂದೇ ಒಂದು ಷರತ್ತು."

ವೀರಕೇಸರಿ: "ರಾಮಯ್ಯನವರ ಎಡಗಡೆಯೂ ಬಲಗಡೆಯೂ ಇರುವ ಕುರ್ಚಿಗಳನ್ನು ತೆಗೆಸಿಬಿಡಬೇಕಾದದ್ದು, ಜಾಗವನ್ನು ಖಾಲಿ ಮಾಡತಕ್ಕದ್ದು."

ಸಭಿಕರು: "ಅದೇಕೆ ಹಾಗೆ ಹೇಳುತ್ತೀರಿ?"

ವೀರಕೇಸರಿ: "ರಾಮಯ್ಯನವರು ಆವೇಶದ ಭಾಷಣಕಾರರು, ಅವರು ಮಾತಾಡುವಾಗ ಮತ್ತೆ ಮತ್ತೆ ತಮ್ಮ ಕೈಗಳನ್ನು ಝಾಡಿಸುತ್ತಾರೆ. ಅವರು ಹಾಗೆ ಕೈ ಒದರುವುದರಿಂದ ಆ ಪಕ್ಕ ಈ ಪಕ್ಕದವರಿಗೆ ಅಪಾಯವಾಗುವ ಸಂಭವವಿದೆ."

ವೀರಕೇಸರಿಯವರ ಮಾತು ಕೇಳಿ ಸಭೆಯಲ್ಲಿ ನಗುವಿನ ಹುಚ್ಚು ಹೊಳೆ ಹರಿಯಿತು. ಇದಾಗುವ ವೇಳೆಗೆ ರಾಮಯ್ಯನವರ ಉಪನ್ಯಾಸೋತ್ಸಾಹ ಅರ್ಧ ಕುಗ್ಗಿತ್ತು. ರಾಮಯ್ಯನವರು ತಮ್ಮ ಮಾತನ್ನು ಮುಗಿಸುತ್ತಿದ್ದಂತೆಯೇ ವೀರಕೇಸರಿ ಶಾಸ್ತ್ರಿಗಳು ಕೇಳಿದರು:

ವೀ: "ರಾಮಯ್ಯನವರೆ, ನನಗೆ ಒಂದೇ ಒಂದು ಸಂದೇಹ ಉಳಿದಿದೆ. ತಾವು ದಯವಿಟ್ಟು ಪರಿಹರಿಸಬೇಕು."

ವೀ: "ತಾವು ಮಾತನಾಡಿದ ಮೇಲೆ ಈ ಕಾಗದವನ್ನು ಮತ್ತೆ ತಮ್ಮ ಜೇಬಿನೊಳಗೆ ತಾನೆ ಇಟ್ಟುಕೊಳ್ಳುತ್ತೀರಿ?"

ವೀ: "ಹಾಗಾದರೆ ಸರಿ." (ಸಭೆಯ ಕಡೆಗೆ ತಿರುಗಿ) ರಾಮಯ್ಯನವರು ತಮಗೆ ಬಂದ ಖಾಸಗಿ ಪತ್ರವನ್ನು ನಮಗೆ ಶ್ರುತಪಡಿಸಿದರು. ಅದನ್ನು ಸಭೆ ಪರಿಗಣನೆಗೆ ತೆಗೆದುಕೊಳ್ಳಬೇಕೆಂಬುದು ಅವರ ಅಭಿಪ್ರಾಯವಲ್ಲ."

ಇಂಥ ಪ್ರಕರಣಗಳು ಲೆಕ್ಕವಿಲ್ಲದಷ್ಟು ನಡೆಯುತ್ತಿದ್ದವು.

ಹೀಗೇ ಇಡಿಯ ವಾತಾವರಣವನ್ನು ಹಸನು ಮಾಡುತ್ತಾ ತಮ್ಮ ಮಾತಿನ ಚತುರತೆಯ ಮೂಲಕವೇ ಪರಿಸ್ಥಿತಿಯನ್ನು ನಿಭಾಯಿಸಿದ ಮಹಾನುಭಾವರು ವೀರ ಕೇಸರಿ ಸೀತಾರಾಮಶಾಸ್ತ್ರಿಗಳು.

ನಿಮ್ಮನ್ನು ನೀವು ಜಯಿಸಿ,
ಆಗ ಇಡೀ ಜಗತ್ತೇ ನಿಮ್ಮದಾಗುತ್ತದೆ.
– **ಸ್ವಾಮಿ ವಿವೇಕಾನಂದರು**



**ಸಂಪಾದಕೀಯ ಸಹಕಾರ:** ಶೈಲೇಶ್ ಕುಲಕರ್ಣಿ, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ, ಅರುಣ್ ಕಿರಿಮಂಜೇಶ್ವರ

# ಸಾಲುದ್ದದ ಸುದ್ದಿಗಳು

ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು ಸ್ವದೇಶ್ ದರ್ಶನ್ 2.0ರ ಮೊದಲ ಹಂತದಲ್ಲಿ ಅಭಿವೃದ್ಧಿಸಲು 36 ಪ್ರವಾಸಿ ಸ್ಥಳಗಳನ್ನು ಆಯ್ಕೆಮಾಡಿದೆ. ಸ್ವದೇಶ್ ದರ್ಶನ್ ಎಂಬುದು ಸುಸ್ಥಿರ ಮತ್ತು ಜವಾಬ್ದಾರಿಯುತ ಪ್ರವಾಸೋದ್ಯಮವನ್ನು ಒಳಗೊಳ್ಳುವ ಮೂಲಸೌಕರ್ಯ ನವೀಕರಣಕ್ಕಾಗಿರುವ ಕೇಂದ್ರದ ಯೋಜನೆಯಾಗಿದೆ. ಸ್ವದೇಶ್ ದರ್ಶನ್ 2.0 ಯೋಜನೆಯು ಪ್ರವಾಸೋದ್ಯಮವನ್ನು ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಯ ಪ್ರಮುಖ ಎಂಜಿನ್‌ನಂತೆ ಇರಿಸುವ ಗುರಿಯನ್ನು ಹೊಂದಿದೆ. ಇದರಡಿ ಪ್ರವಾಸಿ ಸಾಮರ್ಥ್ಯವನ್ನು ಹೊಂದಿರುವ ಸರ್ಕ್ಯೂಟ್‌ಗಳನ್ನು ಯೋಜಿತ ಮತ್ತು ಆದ್ಯತೆಯ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ.



ಐದನೇ ಕಲ್ವರಿ ದರ್ಜೆಯ ಜಲಾಂತರ್ಗಾಮಿ 'ಐಎನ್‌ಎಸ್ ವಗೀರ್' ಅನ್ನು ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಆರ್ ಹರಿಕುಮಾರ್ ಅವರು ಭಾರತೀಯ ನೌಕಾಪಡೆಗೆ ನಿಯೋಜನೆಗೊಳಿಸಿದ್ದಾರೆ. ಫ್ರಾನ್ಸ್ ಮೂಲದ ನೇವಲ್ ಗ್ರೂಪ್ ಸಹಯೋಗದೊಂದಿಗೆ ಮುಂಬೈನ ಮಜಗಾನ್ ಡಾಕ್ ಶಿಪ್ ಬಿಲ್ಡರ್ಸ್ ಲಿಮಿಟೆಡ್ ಭಾರತದಲ್ಲಿ ಈ ಜಲಾಂತರ್ಗಾಮಿ ನೌಕೆಯನ್ನು ನಿರ್ಮಿಸಲಾಗಿದೆ. ಇಲ್ಲಿಯವರೆಗಿನ ಸ್ಥಳೀಯವಾಗಿ ತಯಾರಿಸಿದ ಜಲಾಂತರ್ಗಾಮಿ ನೌಕೆಗಳಲ್ಲಿ ಅತ್ಯಂತ ಕಡಿಮೆ ನಿರ್ಮಾಣ ಸಮಯವನ್ನು ವಗೀರ್ ತೆಗೆದುಕೊಂಡಿರುವುದು ವಿಶೇಷವಾಗಿದೆ. ಮೇಲ್ಮೈ ವಿರೋಧಿ ಯುದ್ಧ, ಜಲಾಂತರ್ಗಾಮಿ ವಿರೋಧಿ ಯುದ್ಧ, ಗುಪ್ತಚರ ಸಂಗ್ರಹಣೆ ಮತ್ತು ಕಣ್ಗಾವಲು ಕಾರ್ಯಾಚರಣೆಗಳು ಸೇರಿದಂತೆ ವಿವಿಧ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಸಮರ್ಥವಾಗಿರುವ ವಗೀರ್ ಭಾರತೀಯ ನೌಕಾಪಡೆಯ ಸಾಮರ್ಥ್ಯವನ್ನು ಹೆಚ್ಚಿಸಲಿದೆ. ಜಲಾಂತರ್ಗಾಮಿ ನೌಕೆಯ ನೀತಿಗೆ ಸಮಾನಾರ್ಥಕವಾಗಿರುವ ಎರಡು ಗುಣಗಳಾದ 'ಸ್ಟೆಲ್ತ್ ಮತ್ತು ಫಿಯರ್‌ಲೆಸ್‌ನೆಸ್' ಅನ್ನು ಪ್ರತಿನಿಧಿಸುವ ಸ್ಯಾಂಡ್ ಶಾರ್ಕ್‌ನ ಹೆಸರನ್ನು ಇದಕ್ಕೆ ಹೆಸರಿಸಲಾಗಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರವನ್ನು ಪ್ರದಾನ ಮಾಡಿದರು. ಆರು ವಿಭಾಗಗಳಲ್ಲಿ ಅಸಾಧಾರಣ ಸಾಧನೆ ಮಾಡಿದ 11 ಮಕ್ಕಳಿಗೆ ಪ್ರಶಸ್ತಿಗಳನ್ನು ನೀಡಲಾಯಿತು. ಕಲೆ, ಸಂಸ್ಕೃತಿ, ಶೌರ್ಯ, ನಾವೀನ್ಯತೆ, ಸಮಾಜ ಸೇವೆ ಮತ್ತು ಕ್ರೀಡೆ ಮುಂತಾದ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿದ ಮಕ್ಕಳನ್ನು ಪ್ರತಿವರ್ಷ ಬಾಲ ಪುರಸ್ಕಾರ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಪ್ರತಿಯೊಬ್ಬ ಪ್ರಶಸ್ತಿ ಪುರಸ್ಕೃತರು ಪದಕ, ಒಂದು ಲಕ್ಷ ರೂಪಾಯಿ ನಗದು ಮತ್ತು ಪ್ರಮಾಣ ಪತ್ರವನ್ನು ಪಡೆಯಲಿದ್ದಾರೆ.




ಒಡಿಶಾದ ಬರ್ಹಾಂಪುರದ ಸರ್ಕಾರಿ ಸ್ವಾಮ್ಯದ ಐಟಿಐ ವಿದ್ಯಾರ್ಥಿಗಳು ಆಟೋಮೊಬೈಲ್ ಸ್ಕ್ರ್ಯಾಪ್‌ಗಳನ್ನು ಬಳಸಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಆರು ಅಡಿ ಎತ್ತರದ ಪ್ರತಿಮೆಯನ್ನು ನಿರ್ಮಿಸಿದ್ದಾರೆ. ನೇತಾಜಿ ಅವರ 126ನೇ ಜನ್ಮದಿನದಂದು ಸಂಸ್ಥೆಯ ಆವರಣದಲ್ಲಿ 1.5 ಟನ್ ತೂಕದ ಪ್ರತಿಮೆಯನ್ನು ಸ್ಥಾಪಿಸುವ ಮೂಲಕ ಅವರಿಗೆ ಗೌರವ ಸಲ್ಲಿಸಲಾಯಿತು.



ಸಾಮಾಜಿಕ ಮಾಧ್ಯಮ ಮತ್ತು ಇತರ ಇಂಟರ್ನೆಟ್ ಆಧಾರಿತ ಪ್ಲಾಟ್‌ಫಾರ್ಮ್‌ಗಳ ವಿರುದ್ಧ ಬಳಕೆದಾರರ ದೂರುಗಳನ್ನು ಪರಿಹರಿಸಲು ಕೇಂದ್ರವು ಮೂರು ಸಮಿತಿಗಳನ್ನು ಸ್ಥಾಪಿಸಿದೆ. ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವಾಲಯವು 2021 ರಲ್ಲಿ ತಿದ್ದುಪಡಿ ಮಾಡಲಾದ ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ನಿಯಮಗಳ ಆಧಾರದ ಮೇಲೆ ಮೂರು ಕುಂದುಕೊರತೆ ಮೇಲ್ಮನವಿ ಸಮಿತಿ (GACs) ಗಳ ರಚನೆಗೆ ಸೂಚನೆ ನೀಡಿದೆ. ಭಾರತದಲ್ಲಿ ಇಂಟರ್ನೆಟ್ "ಮುಕ್ತ, ಸುರಕ್ಷಿತ, ವಿಶ್ವಾಸಾರ್ಹ ಮತ್ತು ಜವಾಬ್ದಾರಿಯುತ" ಎಂದು ಖಚಿತಪಡಿಸಿಕೊಳ್ಳಲು ಕುಂದುಕೊರತೆ ಮೇಲ್ಮನವಿ ಸಮಿತಿ ಒಟ್ಟಾರೆ ನೀತಿ ಮತ್ತು ಕಾನೂನು ಚೌಕಟ್ಟಿನ ಒಂದು ಭಾಗವಾಗಿರುತ್ತದೆ ಎಂದು ಸಚಿವಾಲಯ ಹೇಳಿದೆ.




ರಾಷ್ಟ್ರಪತಿ ಭವನದಲ್ಲಿರುವ ಮೊಘಲ್ ಗಾರ್ಡನ್ ಅನ್ನು ಭಾರತದ ಸ್ವಾತಂತ್ರ್ಯದ 75 ವರ್ಷಗಳನ್ನು ಗುರುತಿಸುವ 'ಅಮೃತ ಮಹೋತ್ಸವ'ದ ಥೀಮ್‌ಗೆ ಅನುಗುಣವಾಗಿ 'ಅಮೃತ್ ಉದ್ಯಾನ್' ಎಂದು ಕೇಂದ್ರ ಸರ್ಕಾರ ಮರುನಾಮಕರಣ ಮಾಡಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಉಪಪತ್ರಿಕಾ ಕಾರ್ಯದರ್ಶಿ ನಾವಿಕಾ ಗುಪ್ತಾ ಈ ಬಗ್ಗೆ ಮಾತನಾಡಿ, 'ಸ್ವಾತಂತ್ರ್ಯದ 75 ವರ್ಷಗಳನ್ನು 'ಆಜಾದಿ ಕಾ ಅಮೃತ್ ಮಹೋತ್ಸವ' ಎಂದು ಆಚರಿಸುವ ಸಂದರ್ಭದಲ್ಲಿ, ಭಾರತದ ರಾಷ್ಟ್ರಪತಿಗಳು ರಾಷ್ಟ್ರಪತಿ ಭವನದ ಉದ್ಯಾನಗಳಿಗೆ ಅಮೃತ್ ಉದ್ಯಾನ ಎಂದು ಹೆಸರನ್ನು ನೀಡಿದ್ದಾರೆ" ಎಂದಿದ್ದಾರೆ. ಅಮೃತ್ ಉದ್ಯಾನ್ ಜನವರಿ 31 ರಿಂದ ಮಾರ್ಚ್ 26 ರವರೆಗೆ ಎರಡು ತಿಂಗಳ ಕಾಲ ಸಾರ್ವಜನಿಕರಿಗೆ ಇದು ತೆರೆದಿರುತ್ತದೆ.





19 ವರ್ಷದೊಳಗಿನವರ ಮಹಿಳಾ ಟಿ–20 ವಿಶ್ವಕಪ್‌ಅನ್ನು ಭಾರತದ ಯುವತಿಯರ ತಂಡ ಮುಡಿಗೇರಿಸಿಕೊಂಡಿದೆ. ಟಿ–20 ವಿಶ್ವಕಪ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ ತಂಡಕ್ಕೆ ಅಭಿನಂದನೆಗಳ ಮಹಾಪೂರ ಹರಿದು ಬರುತ್ತಿದೆ. ವನಿತೆಯರ ಕ್ರಿಕೆಟ್ ತಂಡವನ್ನು ವಿಶ್ವಕಪ್ ಗೆದ್ದಿದ್ದಕ್ಕಾಗಿ ರಾಷ್ಟ್ರಪತಿ, ಉಪರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗಳು ಅಭಿನಂದಿಸಿದ್ದಾರೆ.

ಶ್ರೀಕೃಷ್ಣ ಮತ್ತು ಹನುಮಂತ ಜಗತ್ತಿನ ಸರ್ವಶ್ರೇಷ್ಠ ರಾಜತಾಂತ್ರಿಕರು ಎಂದು ವಿದೇಶಾಂಗ ಸಚಿವ ಜೈ ಶಂಕರ್ ಅವರು ಹೇಳಿದ್ದಾರೆ. ಪುಣೆಯಲ್ಲಿ ಮರಾಠಿಗೆ 'ಭಾರತ್ ಮಾರ್ಗ' ಎಂದು ಅನುವಾದಿಸಲಾಗಿರುವ ತಮ್ಮ ಇಂಗ್ಲಿಷ್ ಪುಸ್ತಕ 'ದಿ ಇಂಡಿಯಾ ವೇ: ಸ್ಟ್ರಾಟಜೀಸ್ ಫಾರ್ ಆನ್ ಅಸರ್ಟೈನ್ ವರ್ಲ್ಡ್' ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು ರಾಜತಾಂತ್ರಿಕತೆಯನ್ನು ವಿವರಿಸುವ ಸಂದರ್ಭದಲ್ಲಿ ಮಹಾಕಾವ್ಯಗಳಾದ ಮಹಾಭಾರತ ಮತ್ತು ರಾಮಾಯಣವನ್ನು ಉಲ್ಲೇಖಿಸಿ ಅದರ ಮಹತ್ವವನ್ನು ಸಾರಿದ್ದಾರೆ.

ಮುಂದಿನ ಹಣಕಾಸು ವರ್ಷದಲ್ಲಿ ದೇಶದಲ್ಲಿ ಎಲೆಕ್ಟ್ರಾನಿಕ್ಸ್ ಉತ್ಪಾದನೆಯು 1.28 ಲಕ್ಷ ಕೋಟಿ ರೂಪಾಯಿಗಳನ್ನು ದಾಟುವ ನಿರೀಕ್ಷೆಯಿದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಐಟಿ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ. ಮಾಧ್ಯಮಕ್ಕೆ ಸಂದರ್ಶನ ನೀಡಿ ಮಾತನಾಡಿದ ಸಚಿವರು, "ಐಟಿ ಹಾರ್ಡ್‌ವೇರ್ ಮತ್ತು ಘಟಕ ತಯಾರಕರಿಗೆ ಹೊಸ ಉತ್ಪಾದನಾ ಸಂಯೋಜಿತ ಪ್ರೋತ್ಸಾಹ ಯೋಜನೆಯೊಂದಿಗೆ ಎಲೆಕ್ಟ್ರಾನಿಕ್ಸ್ ಉತ್ಪಾದನಾ ಪರಿಸರ ವ್ಯವಸ್ಥೆಯನ್ನು ವಿಸ್ತರಿಸಲು ಸರ್ಕಾರ ಹೊರಟಿದೆ. ಒಟ್ಟಾರೆಯಾಗಿ ಎಲೆಕ್ಟ್ರಾನಿಕ್ಸ್ ಉತ್ಪಾದನೆ, ಮುಂದಿನ ವರ್ಷ ಕನಿಷ್ಠ 1.28 ಲಕ್ಷ ಕೋಟಿ ರೂ ತಲುಪಲಿದೆ" ಎಂದಿದ್ದಾರೆ.

ತುಳು ಭಾಷೆಗೆ ಕರ್ನಾಟಕದ ಎರಡನೇ ಅಧಿಕೃತ ಭಾಷೆಯ ಸ್ಥಾನಮಾನ ನೀಡುವ ನಿಟ್ಟಿನಲ್ಲಿ ಅಧ್ಯಯನ ನಡೆಸಲು ರಾಜ್ಯ ಸರ್ಕಾರವು ಸಮಿತಿಯನ್ನು ರಚನೆ ಮಾಡಿದೆ. ಸಮಿತಿಯ ನೇತೃತ್ವವನ್ನು ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಡಾ. ಮೋಹನ್ ಆಳ್ವ ವಹಿಸಿಕೊಂಡಿದ್ದಾರೆ. ಈ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್ ಅವರು ಟ್ವಿಟ್ ಮಾಡಿ ಮಾಹಿತಿ ನೀಡಿದ್ದಾರೆ.

ಜಾಗತಿಕ ಹಿಂಜರಿತದ ಹೊರತಾಗಿಯೂ ಭಾರತವು ವಿಶ್ವದಲ್ಲೇ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಉಳಿಯುತ್ತದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (IMF) ಹೇಳಿದೆ. IMF ಇಂದು ವಿಶ್ವ ಆರ್ಥಿಕ ದೃಷ್ಟಿಕೋನದ ತನ್ನ ಜನವರಿ ಅಪ್‌ಡೇಟ್ ಅನ್ನು ಬಿಡುಗಡೆ ಮಾಡಿದೆ. 2024 ರಲ್ಲಿ ಭಾರತವು ಚೇತರಿಸಿಕೊಳ್ಳುವ ದೇಶೀಯ ಬೇಡಿಕೆಯಿಂದ ಉತ್ತೇಜಿಸಲ್ಪಟ್ಟು 6.8 ಪ್ರತಿಶತಕ್ಕೆ ಏರಲಿದೆ. ಇದಕ್ಕೂ ಮೊದಲು ಭಾರತದ ಆರ್ಥಿಕತೆಯು 2023ರಲ್ಲಿ 6.1 ಶೇಕಡ ಬೆಳೆಯುತ್ತದೆ ಎಂದು ಹೇಳಿದೆ.




ಕೇಂದ್ರ ಪ್ರವಾಸೋದ್ಯಮ ಸಚಿವ ಜಿ. ಕಿಶನ್ ರೆಡ್ಡಿ ನವದೆಹಲಿಯಲ್ಲಿ 'ವಿಸಿಟ್ ಇಂಡಿಯಾ ಇಯರ್ – 2023' ಉಪಕ್ರಮವನ್ನು ಪ್ರಾರಂಭಿಸಿದ್ದು, ಅದರ ಲೋಗೋವನ್ನು ಅನಾವರಣಗೊಳಿಸಿದರು. ಈ ಯೋಜನೆಯಡಿ ದೇಶದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಭವ್ಯವಾದ ಯೋಜನೆಗಳು ಮತ್ತು ಚಟುವಟಿಕೆಗಳು ವರ್ಷಪೂರ್ತಿ ಜರುಗಲಿವೆ. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಭಾರತವು ಜಿ 20 ನೇತೃತ್ವದ ಪ್ರಮುಖ ವರ್ಷದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವಿದೇಶಿ ಪ್ರತಿನಿಧಿಗಳು ಭಾರತಕ್ಕೆ ಭೇಟಿ ನೀಡಲಿದ್ದು, ಸ್ಮಾರಕಗಳು ಮತ್ತು ಉತ್ಸವಗಳು ಸೇರಿದಂತೆ ಭಾರತದ ಸಂಸ್ಕೃತಿಯ ಸಂಪೂರ್ಣತೆಯನ್ನು ಪ್ರದರ್ಶಿಸಲಾಗುವುದು ಎಂದು ಹೇಳಿದರು.

ಸರ್ಕಾರದ ಇ–ಮಾರುಕಟ್ಟೆ ಪ್ರಸಕ್ತ ಹಣಕಾಸು ವರ್ಷದಲ್ಲಿ 1.5 ಲಕ್ಷ ಕೋಟಿ ರೂಪಾಯಿಗಳ ಒಟ್ಟು ಸರಕು ಮೌಲ್ಯವನ್ನು ಸಾಧಿಸಿದೆ. ಪ್ರಸ್ತುತ ಈ ದರದಲ್ಲಿ GeM ತನ್ನ ವಾರ್ಷಿಕ ಗುರಿಯಾದ 1.75 ಲಕ್ಷ ಕೋಟಿ ರೂಪಾಯಿಗಳನ್ನು ಮೀರುವ ಎಲ್ಲಾ ಲಕ್ಷಣಗಳನ್ನು ತೋರಿಸುತ್ತಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿದೆ. GeM ತನ್ನ ಮಧ್ಯಸ್ಥಗಾರರ ಬೆಂಬಲದೊಂದಿಗೆ ಆರಂಭದಿಂದಲೂ 3 ಲಕ್ಷ ಕೋಟಿ ರೂಪಾಯಿಗಳ ಒಟ್ಟು ಮರ್ಚಂಡೈಸ್ ಮೌಲ್ಯವನ್ನು ಮೀರಿಸಿದೆ. GeMನಲ್ಲಿನ ಒಟ್ಟು ವಹಿವಾಟುಗಳ ಸಂಖ್ಯೆಯೂ 1.3 ಕೋಟಿ ದಾಟಿದೆ.




ವಂದೇ ಭಾರತ್ ಎಕ್ಸ್‌ಪ್ರೆಸ್‌ನ ದೇಶವ್ಯಾಪಿ ಯಶಸ್ಸಿನ ನಂತರ, ನಾಗರಿಕರಿಗೆ ಇಂಟರ್‌ಸಿಟಿ ಪ್ರಯಾಣವನ್ನು ಸುಲಭಗೊಳಿಸಲು ವಂದೇ ಭಾರತ್ ಮೆಟ್ರೋವನ್ನು ವಿವಿಧ ನಗರಗಳಲ್ಲಿ ಪರಿಚಯಿಸಲು ಸರ್ಕಾರ ಸಿದ್ಧವಾಗಿದೆ. ನೈಋತ್ಯ ರೈಲ್ವೆ (SWR) ಜನರಲ್ ಮ್ಯಾನೇಜರ್ ಸಂಜೀವ್ ಕಿಶೋರ್ ಪ್ರಕಾರ, ಭಾರತದ ಪ್ರಮುಖ ನಗರ ನಗರಗಳಲ್ಲಿ ಒಂದಾದ ಬೆಂಗಳೂರು ವಂದೇ ಮೆಟ್ರೋವನ್ನು ಪಡೆಯಲಿರುವ ಮೊದಲ ನಗರಗಳಲ್ಲಿ ಒಂದಾಗಿದೆ. ವಂದೇ ಭಾರತ್ ರೈಲುಗಳನ್ನು ನಿರ್ವಹಿಸಲು ನಗರದಲ್ಲಿ ನಡೆಯುತ್ತಿರುವ ರೈಲ್ವೆ ಯೋಜನೆಗಳು, ಲೈನ್‌ಗಳ ದ್ವಿಗುಣಗೊಳಿಸುವಿಕೆ ಮತ್ತು ಚತುಷ್ಪಥಗೊಳಿಸುವಿಕೆ ಮತ್ತು ಮೂಲಸೌಕರ್ಯಗಳ ನಿರ್ಮಾಣ ವಂದೇ ಮೆಟ್ರೋವನ್ನು ಪ್ರಾರಂಭಿಸಲು ಸಹಾಯ ಮಾಡಲಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th FEBRUARY 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 15-2-2023



## ಕನ್ನಡ ಸಾಹಿತ್ಯ–ಸಾರಸ್ವತ ಲೋಕಕ್ಕೆ ಕೆ.ವಿ. ತಿರುಮಲೇಶ್ ಅವರ ಸೇವೆ ಸದಾ ಸ್ಮರಣೀಯ – ವಿ. ನಾಗರಾಜ



ಇತ್ತೀಚೆಗೆ ನಿಧನರಾದ ಕನ್ನಡದ ಹಿರಿಯ ಸಾಹಿತಿ ಕೆ.ವಿ.ತಿರುಮಲೇಶ್ ಅವರ ನಿಧನಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಸಂಘಚಾಲಕರಾದ ಶ್ರೀ ವಿ.ನಾಗರಾಜ ಅವರು ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

“ಕಾವ್ಯ, ಕತೆ, ಕಾದಂಬರಿ ಹೀಗೆ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಛಾಪು ಮೂಡಿಸಿದ್ದ ಕೆ.ವಿ. ತಿರುಮಲೇಶ್ ಅವರ ನಿಧನದ ವಾರ್ತೆ ಅತ್ಯಂತ ದುಃಖಕರ. ಸಾಹಿತ್ಯ ವಿಮರ್ಶೆ ಮತ್ತು ಭಾಷಾ ವಿಜ್ಞಾನ ಕ್ಷೇತ್ರಗಳಲ್ಲಿಯೂ ಕೆಲಸ ಮಾಡುತ್ತಾ ಕನ್ನಡಕ್ಕಾಗಿ ದುಡಿದವರು ಕೆ. ವಿ. ತಿರುಮಲೇಶ್. ಓರ್ವ ಕಥೆಗಾರನಾಗಿ ತಮ್ಮ ಎಂದಿನ ವೈಶಿಷ್ಟ್ಯಪೂರ್ಣ ಶೈಲಿಯಲ್ಲಿ ಗಂಭೀರವಾದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸವಾಲುಗಳ ಸಂಕೀರ್ಣತೆಯನ್ನು ಪದರಗಳಲ್ಲಿ ಬಿಚ್ಚಿಡುವ ಅವರ ಸಾಹಿತ್ಯದ ಪರಿ ಅನನ್ಯ. ಜೀವನ ಪ್ರೀತಿಯ ಸೆಲೆಯಾಗಿದ್ದ ಅವರ ಚಿಂತನೆಗಳಲ್ಲಿ ವಿಶ್ವಪ್ರಜ್ಞೆ, ಅಪಾರ ಜ್ಞಾನ, ಆಳವಾದ ಅನುಭವ, ಪ್ರಾಚೀನ ದರ್ಶನಗಳ ಹೊಳಹುಗಳನ್ನೂ ಕಾಣಬಹುದು. ಜಗತ್ತಿನ ಒಳ್ಳೆಯ ವಿಚಾರಗಳ ಗಾಳಿ ಕನ್ನಡಕ್ಕೂ ಬರಲಿ ಎಂದು ಅನುವಾದದ ಕಿಟಕಿ ತೆರೆದವರು ತಿರುಮಲೇಶ ಅವರು. ಕನ್ನಡ ಸಾಹಿತ್ಯ–ಸಾರಸ್ವತ ಲೋಕಕ್ಕೆ ಅವರ ಸೇವೆ ಸದಾ ಸ್ಮರಣೀಯ.

ಅವರ ದೇಹಾಂತ್ಯವು ಸಾಹಿತ್ಯ ಕ್ಷೇತ್ರಕ್ಕೆ ಹಿರಿದಾದ ನಷ್ಟವಾಗಿದೆ. ಅವರ ನಿಧನದ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ, ಅಭಿಮಾನಿಗಳಿಗೆ ಭಗವಂತನು ನೀಡಲಿ ಹಾಗೂ ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪರವಾಗಿ ಶ್ರದ್ಧಾಂಜಲಿಗಳನ್ನು ಸಲ್ಲಿಸುತ್ತಿದ್ದೇನೆ.”

## ನೇಪಾಳದಿಂದ ಅಯೋಧ್ಯೆ ತಲುಪಿದ ದೈವ ಶಿಲೆ



ಅಯೋಧ್ಯೆಯ ಶ್ರೀರಾಮಮಂದಿರದ ಮೂಲವಿಗ್ರಹಕ್ಕೆ ಅಗತ್ಯವಾಗಿದ್ದ ಶಿಲೆಯನ್ನು ನೇಪಾಳದಿಂದ ತರಿಸಲಾಗಿದೆ. ಅಲ್ಲಿ ಪೂಜೆಗೊಂಡು ವಾಹನಗಳಲ್ಲಿ ಹೊರಟ ಕಲ್ಲುಗಳನ್ನು ದಾರಿಯುದ್ದಕ್ಕೂ ಜನ ಭಕ್ತಿ ಆದರಗಳಿಂದ ಬರಮಾಡಿಕೊಂಡು ಪೂಜಿಸಿದ್ದಾರೆ. ಇದು ನೇಪಾಳದ ಗಂಡಕಿ ನದಿ ದಡದಲ್ಲಿತ್ತು ಎನ್ನಲಾಗಿದ್ದು ಒಟ್ಟು 30 ಟನ್ ತೂಕವಿದೆ. ಅದರಲ್ಲಿ 14–15 ಟನ್‌ನಷ್ಟು ವಿಗ್ರಹಕ್ಕೆ ಬಳಕೆ ಮಾಡಲಾಗುತ್ತದೆ.

ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಂಪತ್ ರಾಯ್ ಅವರು ಮಾತನಾಡಿ, “ನೇಪಾಳದ ಕಾಳೀ ಗಂಡಕಿ ಎನ್ನುವ ನೀರಿನ ಸೆಲೆಯಿದ್ದು, ಅದು ದಾಮೋದರ್ ಕುಂಡ್ ಎಂಬಲ್ಲಿ ಉಗಮವಾಗುತ್ತದೆ. ಅಲ್ಲಿನ ಕಲ್ಲುಗಳನ್ನು ವಿಗ್ರಹಕ್ಕೆ ಬಳಸಲಾಗುತ್ತಿದ್ದು, ಸಮುದ್ರ ಮಟ್ಟದಿಂದ 6,000 ಅಡಿ ಎತ್ತರದಲ್ಲಿದ್ದು, ಸುಮಾರು ಕೋಟಿ ವರ್ಷಗಳಷ್ಟು ಹಳೆಯದು ಎನ್ನಲಾಗುತ್ತಿದೆ” ಎಂದರು.

ನೇಪಾಳದಿಂದ ಬಂದು ಅಯೋಧ್ಯೆಗೆ ತಲುಪಿದ ದೈವ ಶಿಲೆ (ಸಾಲಿಗ್ರಾಮ ಶಿಲೆ)ಯನ್ನು ನೇಪಾಳದ ಶ್ರೀ ಜಾನಕಿ ಮಂದಿರದ ಪೂಜಾರಿ ಶ್ರೀ ಮಹಂತ ರಾಮತಪಸ್ವರದಾಸ ಸ್ವಾಮಿಜಿ, ಜನಕಪುರದ ಮೇಯರ್ ಮನೋಜ್ ಶಾ, ಪೂರ್ವ ಪ್ರಧಾನ ಮಂತ್ರಿ ವಿಮಲೇಂದ್ರ ನಿಧಿಯವರು ದೈವ ಶಿಲೆಯನ್ನು ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ಗೆ ಹಸ್ತಾಂತರಿಸಿದರು.

## ಅಮೃತ ಕಾಲದ ಕರ್ನಾಟಕದ ಪದ್ಮ ಕಣ್ಮಣಿಗಳು

*1ನೇ ಪುಟದಿಂದ...*

### ಪದ್ಮಶ್ರೀ ಮುನಿ ವೆಂಕಟಪ್ಪ



ಮುನಿ ವೆಂಕಟಪ್ಪನವರು ಚಿಕ್ಕಬಳ್ಳಾಪುರದ ಶಿಡ್ಲಘಟ್ಟ ಮೂಲದವರಾಗಿದ್ದು ತಮಟೆಯ ಪಿತಾಮಹ ಎಂದೇ ಗುರುತಿಸಿಕೊಂಡಿರುತ್ತಾರೆ. ಇವರಿಗೆ ಕಲಾ ವಿಭಾಗದಲ್ಲಿ ಈ ವರ್ಷದ ಪದ್ಮ ಭೂಷಣ ಪ್ರಶಸ್ತಿ ಬಂದಿರುತ್ತದೆ. ಜಾನಪದ ವಾದ್ಯ ತಮಟೆಯನ್ನು ಮನೋರಂಜನೆ, ಹವ್ಯಾಸ ಮತ್ತು ಕ್ರಮೇಣ ವೃತ್ತಿಯಾಗಿ ಇವರು ತಮ್ಮ 17ನೇ ವಯಸ್ಸಿನಿಂದ ಬೆಳೆಸುತ್ತಾ ಬಂದಿದ್ದಾರೆ. ಇವರಿಗೆ ಜನಪದ ಲೋಕ ಪ್ರಶಸ್ತಿ, ಪದ್ಮಶ್ರೀ ದೊರೆತಿದ್ದು, ಜಾತ್ರೆ ಸಮಾರಂಭ ಮುಂತಾದವುಗಳಲ್ಲಿ ಇವರ ತಮಟೆ ಪ್ರದರ್ಶನ ಹೆಚ್ಚು ಜನರನ್ನು ಆಕರ್ಷಿಸುತ್ತದೆ. ಯುವಕರ ಹಲವು ತಂಡಗಳಿಗೆ ಇವರು ತಮಟೆ ತರಬೇತಿಯನ್ನು ನೀಡುತ್ತಾರೆ.

ಕನ್ನಡದ ಪ್ರಖ್ಯಾತ ಜನಪದ ತಜ್ಞರಾದ ಎಚ್.ಎಲ್. ನಾಗೇಗೌಡರವರು ಶಿಡ್ಲಘಟ್ಟದ ದೇವರಮಲ್ಲೂರು ಗ್ರಾಮದಲ್ಲಿ ನಡೆದ ಜಾತ್ರಾ ಮಹೋತ್ಸವದಲ್ಲಿ ಇವರ ತಮಟೆ ಪ್ರದರ್ಶನ ಕಂಡು ಇವರಿಗೆ ರಾಜ್ಯ ಮತ್ತು ರಾಷ್ಟ್ರ ಮಾನ್ಯತೆ ದೊರಕಿಸುವಲ್ಲಿ ಸಫಲರಾದರು. ಮುನಿ ವೆಂಕಟಪ್ಪನವರಿಗೆ ಈ ಹಿಂದೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಪ್ರಶಸ್ತಿ ಸೇರಿದಂತೆ ಹಲವು ಪ್ರತಿಷ್ಠಿತ ಪ್ರಶಸ್ತಿಗಳು ಲಭಿಸಿದ್ದು ಕರ್ನಾಟಕ ಸರ್ಕಾರದ ಜಿಲ್ಲಾ ಉತ್ಸವಗಳು, ಕ್ರೀಡಾಕೂಟಗಳು, ಮೈಸೂರು ದಸರಾ ಜೊತೆ ಜೊತೆಗೆ ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಹಲವಾರು ತಮಟೆ ಪ್ರದರ್ಶನಗಳನ್ನು ಇವರು ನೀಡಿರುತ್ತಾರೆ. ತಮಟೆಯನ್ನು ಹೊಸ ಮಾದರಿಯಲ್ಲಿ ಬಡಿಯುವುದು, ಮಧ್ಯಲಾಗ ಹಾಕುವುದು, ಕಣ್ಣಿನಿಂದ ಸೂಜಿ ಎತ್ತುವುದು, ಹಣೆಯಿಂದ ನಾಣ್ಯ ತೆಗೆಯುವುದು ಮುಂತಾದ ಪರಿಣತಿಯನ್ನು ಹೊಂದಿರುತ್ತಾರೆ. 2014ರ ಅಮೆರಿಕದ ಅಕ್ಕ ಸಮ್ಮೇಳನ, 2015ರಲ್ಲಿ ಅಮೆರಿಕದ ನಾವಿಕ ಸಮ್ಮೇಳನ ಹಾಗೂ ಜಪಾನ್ ದೇಶದಲ್ಲಿ ಹಲವಾರು ಪ್ರದರ್ಶನಗಳನ್ನು ಇವರು ನೀಡಿರುತ್ತಾರೆ. ಹಲವು ರೀತಿಯ ಕಷ್ಟ, ಅವಮಾನಗಳನ್ನು ಕಂಡಿದ್ದ ಇವರು ಗಂಟೆಗಟ್ಟಲೆ ತಮಟೆ ಪ್ರದರ್ಶನ ನಡೆಸಿರುವ ಇವರು, ಒಂದೊಮ್ಮೆ ತಮಟೆಯೊಂದಿಗೆ ಬಸ್ ಹತ್ತಿದಾಗ ಅವರನ್ನು ಬಸ್ಸಿನಿಂದ ಇಳಿಸಿದ ವಿಷಯವನ್ನು ಅವರು ನೊಂದು ನುಡಿದಿದ್ದರು. ಶಿಡ್ಲಘಟ್ಟದ ಸರ್ಕಾರಿ ಕಲಾಭವನದಲ್ಲಿ ಯುವಕರ ತಂಡಕ್ಕೆ ತಮಟೆ ತರಬೇತಿ ನೀಡುತ್ತಿದ್ದಾರೆ.

### ಪದ್ಮಶ್ರೀ ರಶೀದ್ ಅಹಮದ್ ಖಾದ್ರಿ



1955ರಲ್ಲಿ ಬೀದರ್ ಜಿಲ್ಲೆಯಲ್ಲಿ ಜನಿಸಿದ ರಶೀದ್ ಅಹಮದ್ ಖಾದ್ರಿರವರು ಬಿದ್ರಿ ಕರಕುಶಲ ಕಲೆಗೆ ಗುರುತಿಸಿಕೊಂಡವರು. 2011ರ ಗಣರಾಜ್ಯೋತ್ಸವದಲ್ಲಿ ದೆಹಲಿಯ ಪಥ ಸಂಚಲನದಲ್ಲಿ ಕರ್ನಾಟಕದ ಸ್ತಬ್ಧಚಿತ್ರ ಬಿದರಿ ಕಲೆ ದ್ವಿತೀಯ ಬಹುಮಾನ ಪಡೆಯುವುದರ ಜೊತೆಗೆ ಖಾದ್ರಿರವರ ಕಲೆಯು ಹೆಚ್ಚು ಪ್ರಚಲಿತಕ್ಕೆ ಬಂದಿತ್ತು. ಇವರು ಶಿಲ್ಪ ಗುರು ಪ್ರಶಸ್ತಿ, ಭಾರತದ ಶ್ರೇಷ್ಠ ಸಾಧಕರ ಪ್ರಶಸ್ತಿ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಷ್ಟ್ರೀಯ ಕರಕುಶಲ ಪ್ರಶಸ್ತಿ ಪಡೆದಿರುತ್ತಾರೆ. ಇವರು ಸೂರಜ್ ಕುಂಡ್ ಮೇಳ, ಡೆಲ್ಲಿ ಹಾಟ್ ಮುಂತಾದ ವಸ್ತು ಪ್ರದರ್ಶನಗಳಲ್ಲಿ ನಿರಂತರವಾಗಿ ತಮ್ಮ ಕಲೆ ಪ್ರದರ್ಶಿಸಿರುತ್ತಾರೆ. ಬೆಂಗಳೂರಿನ ಕಾವೇರಿ ಕರಕುಶಲ ಮ್ಯೂಸಿಯಂನ ಪ್ರಮುಖ ರೂವಾರಿಯಾಗಿರುತ್ತಾರೆ. ಇವರು ಬಿದರಿ ಕಲೆಯ ವಿವಿಧ ವಿಧಾನಗಳು, ವಿನ್ಯಾಸಗಳು, ಪ್ರಮುಖವಾಗಿ ಫುಲ್ ಜಡಿ, ಶೀಟ್ ವರ್ಕ್, ಮುಂತಾದ ಬಹಮನಿ ಕಾಲದ ಕಲೆಯನ್ನು ಪ್ರಚಲಿತಗೊಳಿಸಿರುತ್ತಾರೆ ಹಾಗೂ ಹಲವು ರಾಷ್ಟ್ರಗಳಲ್ಲಿ ತಮ್ಮ ಕಲೆಯ ನೈಪುಣ್ಯತೆಯನ್ನು ಪ್ರದರ್ಶಿಸಿರುತ್ತಾರೆ.

### ಪದ್ಮಶ್ರೀ ಎಸ್. ಸುಬ್ಬರಾಮನ್



1929ರಲ್ಲಿ ಕೊಳ್ಳೇಗಾಲದಲ್ಲಿ ಜನಿಸಿದ ಎಸ್. ಸುಬ್ಬಾರಾಮನ್‌ರವರು ಪುರಾತತ್ವಶಾಸ್ತ್ರ ವಿಭಾಗದ ಪದ್ಮ ಭೂಷಣ ಪ್ರಶಸ್ತಿಗೆ ಭಾಜನರಾಗಿರುತ್ತಾರೆ. ಪುರಾತನ ಕಾಲದ ಮ್ಯೂರಲ್ (ಬಿತ್ತಿ ಚಿತ್ರಗಳನ್ನು) ಪುನರ್–ಸ್ಥಾಪಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಇವರು ಮೈಸೂರಿನ ವಾಸಿಯಾಗಿರುತ್ತಾರೆ ಹಾಗೂ INTACH ಚಿತ್ರಕಲಾ ಪರಿಷತ್ ಆರ್ಟ್ ಕಂಸರ್ವೇಶನ್ ಸೆಂಟರ್‌ನ ಮಾಜಿ ನಿರ್ದೇಶಕರೂ ಆಗಿರುತ್ತಾರೆ. ಇವರ ಪ್ರಮುಖ ಸಂರಕ್ಷಣಾ ಕಾರ್ಯವು ತಮಿಳ್ನಾಡಿನ ತಿರುಮಲೈ ಜೈನ ಗುಹೆಗಳಿಗೆ ಸಂಬಂಧಿಸಿದ್ದು, ನಂತರ ಅಜಂತಾ ಗುಹೆಗಳಲ್ಲಿ Shellac ಪದರವನ್ನು ತೆಗೆಯುವ ಕಾರ್ಯದಲ್ಲಿ ತೊಡಗಿದ್ದರು. ಅಜಂತ ಗುಹೆಗಳ ಹಲವಾರು ಮ್ಯೂರಲ್‌ಗಳಿಗೆ ಪುನರ್ಜೀವ ನೀಡಿರುತ್ತಾರೆ. ಇವರು ಅಟಲ್ ಬಿಹಾರಿ ವಾಜಪೇಯಿರವರು ವಿದೇಶಾಂಗ ಸಚಿವರಾಗಿದ್ದಾಗ, ಅಫ್ಘಾನಿಸ್ತಾನಕ್ಕೆ ಬಾಮಿಯಾನ್ ಬುದ್ಧ ಹಿಂದಿರುಗಿಸುವ ಗುಂಪಿನ ನಾಯಕರಾಗಿ ಕಾರ್ಯನಿರ್ವಹಿಸುತ್ತಾರೆ. 1969–1977ವರೆಗೆ ಬಾಮಿಯಾನ್ ಬುದ್ಧ ಪುನರ್ಚೇತನ ಪರಿಯೋಜನೆಯ ಭಾಗವಾಗಿದ್ದರು. ಕಂಬೋಡಿಯಾದ ಅಂಕೋರ್ ವಾಟ್ ದೇವಾಲಯದ ಸಂರಕ್ಷಣಾ ವರದಿಯನ್ನು ತಯಾರಿಸಿರುತ್ತಾರೆ. ತಂಜಾವೂರಿನ ಬೃಹದೇಶ್ವರ ದೇವಾಲಯ, ಆಂಧ್ರಪ್ರದೇಶದ ಲೇಪಾಕ್ಷಿ ದೇವಾಲಯ ಇವುಗಳ ಪುನಸ್ಥಾಪನ ಕಾರ್ಯಕ್ಕೆ ಇವರ ಕೊಡುಗೆ ಅಪಾರವಾಗಿದೆ. ಭಾರತ ಪುರಾತತ್ವ ಇಲಾಖೆಯ ರಸಾಯನಶಾಸ್ತ್ರಜ್ಞರಾಗಿ ನಿವೃತ್ತರಾಗಿ 35 ವರ್ಷದ ನಂತರ ಇವರಿಗೆ ಸಂದ ಈ ಗೌರವಕ್ಕೆ ಅಚ್ಚರಿ ವ್ಯಕ್ತಪಡಿಸಿದ್ದಾರೆ.

## ಬಾಂಗ್ಲಾದೇಶ: 14 ದೇಗುಲಗಳನ್ನು ಧ್ವಂಸ ಮಾಡಿದ ದುಷ್ಕರ್ಮಿಗಳು



ಇಸ್ಲಾಮಿಕ್ ಮೂಲಭೂತವಾದಿಗಳಿಂದ ತುಂಬಿರುವ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಮುಂದುವರೆದಿದೆ. ವಾಯುವ್ಯ ಬಾಂಗ್ಲಾದೇಶದ 14 ಹಿಂದೂ ದೇವಾಲಯಗಳನ್ನು ಅಪರಿಚಿತ ವ್ಯಕ್ತಿಗಳು ರಾತ್ರೋರಾತ್ರಿ ಧ್ವಂಸಗೊಳಿಸಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

“ರಾತ್ರಿ ವೇಳೆ ದಾಳಿ ನಡೆಸಿರುವ ದುಷ್ಕರ್ಮಿಗಳು 14 ದೇವಾಲಯಗಳಲ್ಲಿನ ವಿಗ್ರಹಗಳನ್ನು ಧ್ವಂಸಗೊಳಿಸಿದ್ದಾರೆ. ಕೆಲವು ವಿಗ್ರಹಗಳು ದೇಗುಲದಲ್ಲಿನ ಕೊಳದಲ್ಲಿ ಪತ್ತೆಯಾಗಿದೆ” ಎಂದು ಬಾಂಗ್ಲಾದ ಹಿಂದೂ ಸಮುದಾಯದ ಮುಖಂಡ ಬಿದ್ಯನಾಥ್ ಬರ್ಮನ್ ಹೇಳಿದ್ದಾರೆ. ಘಟನೆ ಕತ್ತಲೆಯಲ್ಲಿ ಸಂಭವಿಸಿದ ಕಾರಣ ಅಪರಾಧಿಗಳು ಯಾರು ಎಂಬುದು ಪತ್ತೆಯಾಗಿಲ್ಲ, ತನಿಖೆಯ ನಂತರ ಅವರನ್ನು ನ್ಯಾಯಾಂಗದ ಕಟಕಟೆಗೆ ತರುವ ಭರವಸೆ ಇದೆ ಎಂದಿದ್ದಾರೆ. ಬಾಂಗ್ಲಾದ ಹಿಂದೂ ಸಮುದಾಯದ ಮುಖಂಡ ಮತ್ತು ಒಕ್ಕೂಟ ಪರಿಷತ್ ಅಧ್ಯಕ್ಷ ಸಮರ್ ಚಟರ್ಜಿ ಅವರು ಈ ಬಗ್ಗೆ ಪ್ರತಿಕ್ರಿಯೆ ನೀಡಿ, “ಈ ಪ್ರದೇಶವು ಯಾವಾಗಲೂ ಅತ್ಯುತ್ತಮ ಸರ್ವಧರ್ಮ ಸಾಮರಸ್ಯದ ಪ್ರದೇಶವೆಂದು ಹೆಸರುವಾಸಿಯಾಗಿದೆ. ಹಿಂದೆ ಇಂತಹ ಹೇಯ ಘಟನೆ ಇಲ್ಲಿ ನಡೆದಿಲ್ಲ. ಮುಸ್ಲಿಂ ಸಮುದಾಯವು ನಮ್ಮೊಂದಿಗೆ ಯಾವುದೇ ವಿವಾದವನ್ನು ಹೊಂದಿಲ್ಲ. ಹೀಗಾಗಿ ಅಪರಾಧಿಗಳು ಯಾರು ಎಂದು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ” ಎಂದಿದ್ದಾರೆ.

ಬಲಿಯಡಂಗಿ ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿ ಖೈರುಲ್ ಅನಮ್ ಮಾತನಾಡಿ, ಶನಿವಾರ ರಾತ್ರಿಯಿಂದ ಭಾನುವಾರ ಬೆಳಗಿನ ಜಾವದ ನಡುವೆ ಹಲವು ಗ್ರಾಮಗಳಲ್ಲಿ ದಾಳಿ ನಡೆದಿದೆ ಎಂದಿದ್ದಾರೆ. “ಇದು ಸ್ಪಷ್ಟವಾಗಿ ದೇಶದ ಶಾಂತಿಯುತ ಪರಿಸ್ಥಿತಿಯನ್ನು ಅಡ್ಡಿಪಡಿಸಲು ನಡೆಸಿದ ಸಂಯೋಜಿತ ದಾಳಿಯಾಗಿದೆ” ಎಂದು ಠಾಕೂರ್‌ಗಾಂವ್‌ನ ಪೊಲೀಸ್ ಮುಖ್ಯಸ್ಥ ಜಹಾಂಗೀರ್ ಹೊಸೈನ್ ದೇವಾಲಯದ ಸ್ಥಳವೊಂದರಲ್ಲಿ ಸುದ್ದಿಗಾರರಿಗೆ ತಿಳಿಸಿದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.